SPL. C. 5243/2024

ಪ್ರಾ.ಸಾ **:95** ಪ್ರಾ.ಸಾ **:18**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು ಪೀಠ ಸಿಂಧನೂರು

ಸಾಕ್ಷಿಯ ಹೆಸರು	:	ವಿಕಾಸ ಪಿ. ಲಮಾಣಿ
ತಂದೆ ಹೆಸರು	:	ಪಾಂಡಪ್ಪ
ವಯಸ್ಸು	:	43 ವರ್ಷ
ಉದ್ಯೋಗ	:	ಸಿ.ಪಿ.ಐ.
ವಿಳಾಸ	:	ಹಗರಿ ಬೊಮ್ಮನಹಳ್ಳಿ

ಸಾಕ್ಷಿಗೆ ದಿನಾಂಕ **10-03 -2026** ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯವಿಚಾರಣೆ **:** ವಿಶೇಷ ಸರ್ಕಾರಿ ಅಭಿಯೋಜಕರಿಂದ **:**

ದಿನಾಂಕ 28-07-2017 ರಿಂದ 27-03-2018 ರವರೆಗೆ ನಾನು ರಾಯಚೂರಿನ ಕರ್ನಾಟಕ ಲೋಕಾಯುಕ್ತ ಕಛೇರಿಯಲ್ಲಿ ಪೊಲೀಸ್ ನಿರೀಕ್ಷಕರ ಪ್ರಬಾರ ಹೊಂದಿದ್ದೆನು.

2. ದಿನಾಂಕ 28-07-2017 ರಂದು ಕರ್ನಾಟಕ ಲೋಕಾಯುಕ್ತ ರಾಯಚೂರಿನ ಪೊಲೀಸ್ ವರಿಷ್ಠಾಧಿಕಾರಿಗಳು ನನಗೆ ಈ ಕೇಸಿನ ತನಿಖೆಯನ್ನು ವಹಿಸಿಕೊಳ್ಳಬೇಕೆಂದು ಆದೇಶ ಮಾಡಿದ್ದರು. ಸಾಕ್ಷಿ ಗುರುತಿಸಿದ ಆದೇಶವನ್ನು ನಿ.ಪಿ.132 ಎಂದು ಗುರುತಿಸಲಾಯಿತು.

3. ಅದೇ ದಿನ ನಾನು ಈ ಕೇಸಿನ ಕಡತವನ್ನು ಪ್ರಾ.ಸಾ93 ಇವರಿಂದ ಮುಂದಿನ ತನಿಖೆಗಾಗಿ ಪಡೆದುಕೊಂಡಿದ್ದೇನೆ.

4. ನಾನು ಹಿಂದಿನ ತನಿಖಾಧಿಕಾರಿಗಳು ಕಲೆ ಹಾಕಿದ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. ಆ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿದಾಗ ಆರೋಪಿ ಕೆ.ಆರ್. ಐ. ಡಿ. ಎಲ್. ಸರಕಾರಿ ಸಾಮ್ಯಾದ ಕಂಪನಿಯಲ್ಲಿ ಕಿರಿಯ ಅಭಿಯಂತರನಾಗಿ ದಿನಾಂಕ 12-12-1979 ರಲ್ಲಿ ನೇಮಕಾತಿ ಹೊಂದಿದ್ದನು ಮತ್ತು ದಿನಾಂಕ 29-12-2015 ರಲ್ಲಿ ಸಿಂಧನೂರಿನಲ್ಲಿದ್ದ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ದಿ ನಿಗಮ ನಿಯಮಿತ ಉಪವಿಭಾಗದಲ್ಲಿ ಸಹಾಯ ಕಾರ್ಯನಿರ್ವಾಹಕ ಅಭಿಯಂತರನಾಗಿ ಕಾರ್ಯ ನಿರ್ವಹಿಸುತ್ತಿದ್ದನು ಎಂದು ಕಂಡು ಬಂದಿದೆ. ದಿನಾಂಕ 12-12-1979 ರಿಂದ 29-12-2015 ರ ಅವಧಿಯಲ್ಲಿ ಆರೋಪಿ ಮೇಲೆ ಹೇಳಿದ ಕಂಪನಿಯಲ್ಲಿ ಕಾರ್ಯ ನಿರ್ವಹಿಸಿದ್ದಾನೆ. ಆತ ಸರಕಾರಿ ನೌಕರನು ಆಗಿದ್ದನು.

5. ದಿನಾಂಕ 12-12-1979 ರಿಂದ 29-12-2015 ರ ಅವಧಿಯಲ್ಲಿ ಆರೋಪಿ

ಸಂಪಾಧಿಸಿದ ಚರ ಮತ್ತು ಸ್ಥಿರ ಆಸ್ತಿಗಳ ಒಟ್ಟು ಮೌಲ್ಯ 1,69,31,629/- ರೂಪಾಯಿ ಆಗಿರುತ್ತದೆ. ಅದೇ ರೀತಿ ಆರೋಪಿ ಆ ಅವಧಿಯಲ್ಲಿ ಮಾಡಿದ ಒಟ್ಟು ಖರ್ಚು 48,65,412/- ರೂಪಾಯಿ ಇರುತ್ತದೆ. ಆ ಅವಧಿಯಲ್ಲಿ ಆರೋಪಿಗೆ ಬಂದಂತಹ ನ್ಯಾಯಾ ಸಮ್ಮತ ಆದಾಯ 86,28,308/- ರೂಪಾಯಿ ಇರುತ್ತದೆ.

6. ಆರೋಪಿ ತನ್ನ ಆದಾಯಕ್ಕಿಂತ 1,31,68,733/- ರೂಪಾಯಿ ಮೌಲ್ಯದ ಹೆಚ್ಚಿನ ಆಸ್ತಿ ಹೊಂದಿದ್ದನು. ಕಾರಣ ಆ ಮೊತ್ತ ಆರೋಪಿಯ ಅಸಮತೋಲನ ಆಸ್ತಿಯ ಮೌಲ್ಯ ಆಗಿದೆ. ಈ ಕಾರಣಕ್ಕಾಗಿ ನಾನು ಆರೋಪಿಯ ವಿರುದ್ಧ ಲಂಚ ನಿರ್ಮೂಲನಾ ಕಾಯ್ದೆ ಕಲಂ 13(1)(e) ಸಹ ಕಲಂ 13(2) ರ ಅಡಿಯಲ್ಲಿ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ.

7. ಆರೋಪಿ ತನ್ನ schedule ಗಳಲ್ಲಿ ತನ್ನ ಹೆಂಡತಿಯ ಹೆಸರಿನಲ್ಲಿರುವ ಮೈಸೂರು ನಗರದ ಬಣ್ಣಿ ಮಂಟಪ ಬಿ ಬಡಾವಣೆಯ ಮನೆ ನಂಬರ್ 200, ಮನೆ ನಂಬರ್ 2974, ಮನೆ ನಂಬರ್ 362 ಹಾಗೂ ಆರೋಪಿಯ ಮಗನಾದ ಸೋಹೇಲ್ ಪಾಷಾ ಈತನ ಹೆಸರಿನಲ್ಲಿದ್ದ ಮನೆಯ ನಂಬರ್ 257/1/256/252/16/1/57, 58, 71, 72 ಇವುಗಳಿಗೆ ಸಂಬಂಧಿಸಿ ಚಕ್ ಅವಧಿಯಲ್ಲಿ 44,38,100/- ರೂಪಾಯಿ ಆದಾಯ ಮನೆ ಬಾಡಿಗೆಯಿಂದ ಬಂದಿತ್ತು ಎಂದು ತೋರಿಸಿದ್ದಾನೆ. ಆ ಆದಾಯವನ್ನು ನಾನು ಕೆಳಗಿನ ಕಾರಣಗಳಿಗಾಗಿ ಗಣನೆಗೆ ತೆಗೆದುಕೊಂಡಿರುವುದಿಲ್ಲ.

a) ಆರೋಪಿ ಆ ಮನೆ ಕಟ್ಟಿಸಲು ತನ್ನ ಮೇಲಾಧಿಕಾರಿಗಳಿಂದ ಪರವಾನಿಗೆ ಪಡೆದಿರುವುದಿಲ್ಲ ಮತ್ತು ಮನೆ ಕಟ್ಟಿಸಿದ ನಂತರ ಮನೆಯನ್ನು ಕಟ್ಟಿಸಿದ ಮಾಹಿತಿಯನ್ನು ಮೇಲಾಧಿಕಾರಿಗಳಿಗೆ ನೀಡಿರುವುದಿಲ್ಲ.

b) ಆರೋಪಿ ತನ್ನ ಸ್ವತ್ತು ಮತ್ತು ದಾಯತ್ವ ಪಟ್ಟಿಗಳಲ್ಲಿ ಪ್ರತಿವರ್ಷ ಬಂದಂತಹ ಬಾಡಿಗೆ ಆದಾಯವನ್ನು ತೋರಿಸಿರುವುದಿಲ್ಲ.

c) ಆರೋಪಿ ತನ್ನ ಆದಾಯ ತೆರಿಗೆ ರಿಟರ್ನಗಳಲ್ಲಿ ಬಾಡಿಗೆ ಹಣವನ್ನು ಕಾಣಿಸಿರುವುದಿಲ್ಲ.

d) ದಾಳಿ ಆದನಂತರ ತಯಾರಿಸಿದಂತಹ affidavit ಗಳನ್ನು ಆರೋಪಿ ಸಲ್ಲಿಸಿದ್ದಾನೆ.

8. ಆರೋಪಿ ತನ್ನ schedule ನಂಬರ್ 3 ರಲ್ಲಿ ತನಗೆ ಪಿತ್ರಾರ್ಜಿತ ಜಮೀನುಗಳಿಂದ 22,60,000/- ರೂಪಾಯಿ ಆದಾಯ ಚಕ್ ಅವಧಿಯಲ್ಲಿ ಬಂದಿದೆ ಎಂದು ಕಾಣಿಸಿರುತ್ತಾನೆ.

ಆದರೆ ನಾನು ಆರೋಪಿಗೆ ಕೇವಲ 1,10,000/- ರೂಪಾಯಿ ಆದಾಯ ಜಮೀನುಗಳಿಂದ ಬಂದಿದೆ ಎಂದು ಪರಿಗಣಿಸಿದ್ದೇನೆ. ಆರೋಪಿ ತನ್ನ ಸ್ವತ್ತು ಮತ್ತು ದಾಯತ್ವ ಪಟ್ಟಿಗಳಲ್ಲಿ ಪ್ರತಿವರ್ಷ ಪಿತ್ರಾರ್ಜಿತ ಆಸ್ತಿಗಳಿಂದ ಬಂದ ಆದಾಯವನ್ನು ತೋರಿಸಿರುವುದಿಲ್ಲ. ಆರೋಪಿ ಆದಾಯ ತೆರಿಗೆ ರಿಟರ್ನಗಳಲ್ಲಿ ಆ ಅದಾಯವನ್ನು ಕಾಣಿಸಿರುವುದಿಲ್ಲ. ಈ ಎರಡು ಕಾರಣಗಳಿಗಾಗಿ ಆರೋಪಿಗೆ 22,60,000/- ರೂಪಾಯಿ ಆದಾಯ ಪಿತ್ರಾರ್ಜಿತ ಆಸ್ತಿಗಳಿಂದ ಬಂದಿಲ್ಲ ಎಂದು ಅಭಿಪ್ರಾಯ ಪಟ್ಟಿರುತ್ತೇನೆ.

9. ಪ್ರಾ.ಸಾ15 ಇವರು ತನಿಖೆ ಮಾಡುವಾಗ ಆರೋಪಿ ಕೆಲಸ ಮಾಡುತ್ತಿದ್ದ ಸಂಸ್ಥೆಗೆ ಪತ್ರ ಬರೆದು ಆರೋಪಿಯ ಆಸ್ತಿ ಮತ್ತು ದಾಯತ್ವ ಪಟ್ಟಿಗಳನ್ನು ಪೂರೈಸುವಂತೆ ಕೇಳಿದ್ದರು. ಆಗ ಆರೋಪಿ ಕೆಲಸ ಮಾಡುತ್ತಿದ್ದ ಸಂಸ್ಥೆಯವರು ದಿನಾಂಕ 14-01-2016 ರಂದು ಪತ್ರ ಬರೆದು ಅದರೊಂದಿಗೆ ಮೂರು ವರ್ಷದ ಆಸ್ತಿ ಮತ್ತು ದಾಯತ್ವ ಪಟ್ಟಿಗಳನ್ನು ಪೂರೈಸಿದ್ದಾರೆ. ಸಾಕ್ಷಿ ಗುರುತಿಸಿದ ಪತ್ರವನ್ನು ನಿ.ಪಿ.133 ಎಂದು, 2000-2001 ರ ಪಟ್ಟಿಯನ್ನು ನಿ.ಪಿ. 134 ಎಂದು, 2003-2004 ರ ಪಟ್ಟಿಯನ್ನು ನಿ.ಪಿ.135 ಎಂದು ಹಾಗೂ 2008-2009 ರ ಪಟ್ಟಿಯನ್ನು ನಿ.ಪಿ.136 ಎಂದು ಗುರುತಿಸಲಾಯಿತು. ಆರೋಪಿ ತನ್ನ schedule ಗಳೊಂದಿಗೆ ತಾನು ಪ್ರತಿ ವರ್ಷ ಸಲ್ಲಿಸಿದ ಆಸ್ತಿ ಮತ್ತು ದಾಯತ್ವ ಪಟ್ಟಿಗಳನ್ನು ಸಲ್ಲಿಸಿರುವುದಿಲ್ಲ. ಆತ ಕೆಲಸ ಮಾಡುತ್ತಿದ್ದ ಸಂಸ್ಥೆಯವರು ಸಹ ಉಳಿದ ವರ್ಷಗಳ ಆಸ್ತಿ ಮತ್ತು ದಾಯತ್ವ ಪಟ್ಟಿಗಳನ್ನು ಕೇಳಿದರೂ ಕೊಟ್ಟಿರುವುದಿಲ್ಲ. ಆರೋಪಿ ಮೇಲೆ ಹೇಳಿದ ಮೂರು ವರ್ಷಗಳನ್ನು ಹೊರೆತು ಪಡಿಸಿ ಬೇರೆ ವರ್ಷಗಳಲ್ಲಿ ತನ್ನ ಆಸ್ತಿ ಮತ್ತು ದಾಯತ್ವ ಪಟ್ಟಿಗಳನ್ನು ಸಲ್ಲಿಸಿರುವುದಿಲ್ಲ. ನಿ.ಪಿ.133 ರಿಂದ 136 ರಲ್ಲಿರುವ ವಿವರಗಳನ್ನು ಆರೋಪಿ ತಾನು ಅರ್ಜಿಸಿದ ಆಸ್ತಿಗಳು ಯಾವುವು, ಖರ್ಚಿನ ವಿವರಗಳು ಏನು ಮತ್ತು ಆದಾಯದ ವಿವರಗಳು ಏನು ಎಂಬುದನ್ನುತಿಳಿದುಕೊಳ್ಳಲು ಪರಿಶೀಲನೆ ಮಾಡಿರುತ್ತೇನೆ.

10. ಆರೋಪಿ ತನ್ನ schedule ದಲ್ಲಿ 1) ಸಿರಾಜುದ್ದೀನ್ ಶೇಖ್ ಈತನಿಂದ 1,18,50,000/- ರೂಪಾಯಿ ಹಣವನ್ನು, 2) ಹರೀಶ್ ಚಂದ್ರ ರಾಥೋಡ್ ಈತನಿಂದ 2,00,000/- ರೂಪಾಯಿ ಹಣವನ್ನು, 3) ಹಸನ್ ಅಲಿ ಈತನಿಂದ 7,89,241/- ರೂಪಾಯಿ ಹಣವನ್ನು, 4) ಸೀರಾಜುದ್ದೀನ ಶೇಖ್ ಈತನಿಂದ 7,00,000/- ರೂಪಾಯಿ ಹಣವನ್ನು, 5) ಮೊಹಮ್ಮದ ಆರೀಫ್ ಈತನಿಂದ 10,000/- ರೂಪಾಯಿ ಹಣವನ್ನು, 6) ಶಾಹೀದ್ ಈತನಿಂದ

5,03,695/- ರೂಪಾಯಿ ಹಣವನ್ನು ಸಾಲದ ರೂಪದಲ್ಲಿ ಬೇರೆ ಬೇರೆ ದಿನಾಂಕಗಳಂದು ಪಡೆದಿದ್ದೇನೆ ಎಂದು ತಿಳಿಸಿರುತ್ತಾನೆ ಮತ್ತು ಆ ಸಾಲದ ನೀಡಿದ ವ್ಯಕ್ತಿಗಳ ಪತ್ರಗಳನ್ನು ನೀಡಿದ್ದಾನೆ.

11. ನಾನು ಮೇಲೆ ಹೇಳಿದ ಎಲ್ಲಾ ಪತ್ರಗಳನ್ನು ಪರಿಶೀಲನೆ ಮಾಡಿದ್ದೇನೆ. ಸಾಲ ನೀಡಿದ ವ್ಯಕ್ತಿಗಳು ನೀಡಿದಂತಹ ಪತ್ರಗಳು ಈ ಪ್ರಕರಣ ದಾಖಲಾದ ನಂತರ ಅಸ್ತಿತ್ವದಲ್ಲಿ ಬಂದಿವೆ. ಆರೋಪಿ ತನ್ನ ಆದಾಯ ತೆರಿಗೆ ರಿಟರ್ನದಲ್ಲಾಗಲಿ ಅಥವಾ ಅಸ್ತಿ ಮತ್ತು ದಾಯತ್ವ ಪಟ್ಟಿಗಳಲ್ಲಾಗಲಿ ಮೇಲೆ ಹೇಳಿದ ಸಾಲಗಳನ್ನು ಪಡೆದಿದ್ದೇನೆ ಎಂದು ಉಲ್ಲೇಖ ಮಾಡಿರುವುದಿಲ್ಲ. ಆ ಸಾಲ ಪಡೆದ ಕುರಿತು ಆರೋಪಿ ತನ್ನ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿರುವುದಿಲ್ಲ. ಈ ಕಾರಣಗಳಿಗಾಗಿ ತನಿಖೆಯಲ್ಲಿ ನನಗೆ ಆರೋಪಿ ಮೇಲೆ ಹೇಳಿದ ಆರು ಜನರಿಂದ ಸಾಲವನ್ನು ಪಡೆದಿಲ್ಲ ಎಂದು ಕಂಡು ಬಂದಿದೆ. ಈ ಕಾರಣಕ್ಕಾಗಿ ನಾನು ಆರೋಪಿಯ ವಿನಂತಿಯನ್ನು ತಳ್ಳಿ ಹಾಕಿ ಸಾಲದ ಹಣವನ್ನು ಆದಾಯವೆಂದು ಪರಿಗಣಿಸಿರುವುದಿಲ್ಲ.

ಪಾಟೀ ಸವಾಲು**:** ಆರೋಪಿ ಪರ ವಕೀಲರಿಂದ**:**

(ಆರೋಪಿ ಪರ ವಕೀಲರು ಸಮಯ ಕೋರಿದ್ದಾರೆ. ಕಾರಣ ಪಾಟೀ ಸವಾಲನ್ನುಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು

ಸಾಕ್ಷಿಯನ್ನು ಪುನ**:** ಕರೆಯಿಸಿ ದಿನಾಂಕ **21-05-2026** ರಂದು ಪ್ರಮಾಣ ವಚನ ಭೋದಿಸಲಾಯಿತು**.**

<u>ಪಾಟೀ ಸವಾಲು**:** ಆರೋಪಿ ಪರ ವಕೀಲರಿಂದ**:**</u>

12. ನಾನು ಈ ಕೇಸನ್ನು ಹೊರೆತು ಪಡಿಸಿ ಇದೇ ರೀತಿಯ ಬೇರೆ ಎರಡು ಕೇಸುಗಳಲ್ಲಿ ತನಿಖೆ ಮಾಡಿರುತ್ತೇನೆ.

13.ಕೆ. ಆರ್. ಡಿ. ಎಲ್. ಇದು ನೊಂದಾಯಿತಿ ಕಂಪನಿ ಇರುತ್ತದೆ ಅಂದರೆ ಸರಿಯಲ್ಲ. ಆದರೆ ಸರಕಾರಿ ಸೌಮ್ಯದ ಕಂಪನಿ ಇರುತ್ತದೆ ಎಂದು ಸಾಕ್ಷಿ ಮುಂದುವರೆದು ಹೇಳಿರುತ್ತಾರೆ. ಸರಕಾರಿ ಸೌಮ್ಯದ ಕಂಪನಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕೆ. ಆರ್. ಡಿ. ಎಲ್. ಇದರ ಮೊದಲಿನ ಹೆಸರು ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಆಗಿತ್ತು ಅಂದರೆ ಸರಿ. ಕೆ. ಆರ್. ಡಿ. ಎಲ್. ಕಂಪನಿಯ ಉದ್ಯೋಗಿಗಳನ್ನು ನೇಮಕಾತಿ ಮಾಡುವ ಮತ್ತು ತೆಗೆದು ಹಾಕುವ ಅಧಿಕಾರಿ ಅದೇ ಕಂಪನಿಗೆ ಇದೆ ಅಂದರೆ ಸರಿ. ನನ್ನ ತನಿಖಾ ಅವಧಿಯಲ್ಲಿ ನಾನು ಆ ಕಂಪನಿಯ ಬೈಲಾ, articles of association ಮತ್ತು memorandum of association ಇವುಗಳನ್ನು ಪಡೆದುಕೊಂಡಿರುವುದಿಲ್ಲ. ಕೆ. ಆರ್. ಡಿ. ಎಲ್. ಉದ್ಯೋಗಿಗಳಿಗೆ ಅದೇ ಕಂಪನಿ ಸಂಬಳ ನೀಡುತ್ತದೆ ಅಂದರೆ ಸರಿ. ಸಾಕ್ಷಿ ಮುಂದುವರೆದು ಸರಕಾರ ಆ ಕಂಪನಿಗೆ ಅನುಧಾನ ನೀಡಿದ ನಂತರ ಆ ಅನುಧಾನವನ್ನು ಸಂಬಳವಾಗಿ ಕಂಪನಿ ತನ್ನ ನೌಕರರಿಗೆ ನೀಡುತ್ತದೆ ಎಂದು ಹೇಳಿರುತ್ತಾರೆ. ಕೆ. ಆರ್. ಡಿ. ಎಲ್. ಕಂಪನಿಗೆ ಸರಕಾರದಿಂದ ಅನುಧಾನ ಬಂದ ಕುರಿತು ನಾನು ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ.

14. ಕಂಪನಿಯ ನೌಕರರಿಗೆ ಕೆ. ಸಿ. ಎಸ್. ಆರ್. ಅನ್ವಯಿಸುವುದಿಲ್ಲ. ನಾನು ಕಂಪನಿಯ ಮುಖ್ಯಸ್ಥರಿಂದ ನೌಕರರು ಆಸ್ತಿ ಮತ್ತು ದಾಯತ್ವ ವರದಿಗಳನ್ನು ಪಡೆದುಕೊಳ್ಳುವ ನಿಯಮಾವಳಿಗಳು ಇದ್ದ ಕುರಿತು ನಾನು ಯಾವುದೇ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಆರೋಪಿ ಸರಕಾರಿ ನೌಕರನು ಆಗಿರಲಿಲ್ಲ ಅಂದರೆ ಸರಿಯಲ್ಲ. ಆತನಿಗೆ ಪಿ.ಸಿ. ಕಾನೂನು ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ.

15. ನಾನು ಹಿಂದಿನ ತನಿಖಾಧಿಕಾರಿ ಮಾಡಿದ ತನಿಖೆಯನ್ನ ಪರಿಶೀಲನೆ ಮಾಡಿದ್ದೇನೆ. ಆರೋಪಿ ತನ್ನ ಶೆಡ್ಯೂಲ್‌ಗಳನ್ನು ಮತ್ತು ಶೆಡ್ಯೂಲುಗಳೊಂದಿಗೆ ದಾಖಲೆಗಳನ್ನು

ಸಲ್ಲಿಸಿರುತ್ತಾನೆ. ಆರೋಪಿಯ ನಿವೃತ್ತಿ ದಿನಾಂಕ 30-06-2016 ಇತ್ತು ಅಂದರೆ ಸರಿ.

16. ಮನೆಗಳ ಮೌಲ್ಯಗಳನ್ನು ಮಾಡುವ ಅಧಿಕಾರಿ ಲೊಕೋಪಯೋಗಿ ಇಲಾಖೆಯ Executive Engineer ಇವರಿಗೆ ಮಾತ್ರ ಇದೆ ಅಂದರೆ ಸರಿಯಲ್ಲ. ಮನೆಗಳ ಮೌಲ್ಯ ಮಾಪನ ಮಾಡಿದ ಇಂಜಿನಿಯರುಗಳನ್ನು ಸಾಕ್ಷಿಗಳನ್ನಾಗಿ ದೋಷಾರೋಪಣ ಪತ್ರದಲ್ಲಿ ತೋರಿಸಿರುವುದಿಲ್ಲ. ಡಿ. ಎಸ್. ಆರ್. ಪ್ರಕಾರ ಆಸ್ತಿಗಳ ಮೌಲ್ಯಗಳನ್ನು ಕಂಡು ಕೊಂಡಾಗ ಅದರಲ್ಲಿ 10% contingency expenditure ಮತ್ತು 10% ರಷ್ಟು contractor profit ಸೇರಿರುತ್ತದೆ ಅಂದರೆ ನನಗೆ ಗೊತ್ತಿರುವುದಿಲ್ಲ. ಮನೆಗಳನ್ನು ಕಟ್ಟಿಸುವ ಮಾಲೀಕನೇ ಸತ: ಕಟ್ಟಡವನ್ನು ಕಟ್ಟಿಸಿದರೆ ಮೇಲೆ ಹೇಳಿದ contingency expenditure ಮತ್ತು contractor profit ಆತನಿಗೆ ಉಳಿಯುತ್ತದೆ ಅಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿ engineer ಇದ್ದಾನೆ ಅಂದರೆ ಸರಿ.

17. ನಿ.ಪಿ.130 ಮತ್ತು 131 ಇವುಗಳನ್ನು junior engineer ತಯಾರಿಸಿದ್ದಾನೆ ಮತ್ತು ಅವುಗಳಿಗೆ Asst. Executive Engineer ಮೇಲು ರುಜು ಮಾಡಿದ್ದಾನೆ ಅಂದರೆ ಸರಿ. ನಿ.ಪಿ.130 ಮತ್ತು 131 ರಲ್ಲಿ contingency expenditure ಮತ್ತು contractor profit ಕೂಡಿವೆ ಅಂದರೆ ಸರಿಯಲ್ಲ. ಆ ವೆಚ್ಚ ಸೇರಿದ್ದರೂ ಸಹ ಅದನ್ನು ಮರೆ ಮಾಚಲು ನಾನು ಅವುಗಳನ್ನು ನೀಡಿದ engineer ಗಳನ್ನು ಸಾಕ್ಷಿದಾರರನ್ನಾಗಿ ಕಾಣಿಸಿಲ್ಲ ಅಂದರೆ ಸರಿಯಲ್ಲ. ನಿ.ಪಿ.130 ರಲ್ಲಿ 11,00,000/- ವೆಚ್ಚವನ್ನು ಹಾಗೂ ನಿ.ಪಿ.131 ರಲ್ಲಿ 1,72,000/- ವೆಚ್ಚವನ್ನು ಹೆಚ್ಚಿಗೆ ಕಾಣಿಸಲಾಗಿದೆ ಅಂದರೆ ಸರಿಯಲ್ಲ. ಆರೋಪಿ ತನ್ನ ಶಡ್ಯೂಲ್‌ಗಳಲ್ಲಿ ಕಾಣಿಸಿದಂತಹ ನಿ.ಪಿ.130 ಮತ್ತು 131 ಕ್ಕೆ ಸಂಬಂದಿಸಿ ಯಾವುದೇ ಸಾಕ್ಷಿದಾರರನ್ನು ಕರೆಸಿ ವಿಚಾರಣೆಯನ್ನು ಮಾಡಿರುವುದಿಲ್ಲ. ಶಡ್ಯೂಲ್‌ಗಳೊಂದಿಗೆ ನೀಡಿದ ದಾಖಲಾತಿಗಳಲ್ಲಿ ಕಾಣಿಸಿದಂತಹ ವ್ಯಕ್ತಿಗಳನ್ನು ನಾನು ವಿಚಾರಣೆಯ ಮಾಡಿವುದಿಲ್ಲ.

18. ನಿ.ಪಿ.117 ರಲ್ಲಿಯ volume No.2 ರಲ್ಲಿ index ದಲ್ಲಿ ಕ್ರಮ ಸಂ. 22(a) ದಲ್ಲಿ ಕಾಣಿಸಿದ ದಾಖಲೆಯನ್ನು ಆರೋಪಿ ತನ್ನ ಶಡ್ಯೂಲ್‌ಗಳೊಂದಿಗೆ ಸಲ್ಲಿಸಿದ್ದನು ಅಂದರೆ ಸಾಕ್ಷಿ ಆರೋಪಿ ಸಲ್ಲಿಸಿದ ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎಂದು ಉತ್ತರಿಸಿದ್ದಾರೆ.

19. ನಿ.ಪಿ.130 ರಲ್ಲಿರುವ ಆಸ್ತಿ ಸೊಹೆಲ್ ಪಾಷ ಈತನ ಹೆಸರಿನಲ್ಲಿದೆ ಅಂದರೆ ಸರಿ. ನಿ.ಪಿ.131 ರಲ್ಲಿರುವ ಆಸ್ತಿ ಮುಬಾರಕ್ ಬೇಗಂ ಇವರ ಹೆಸರಿನಲ್ಲಿದೆ ಅಂದರೆ ಸರಿ. ನಿ.ಪಿ.9 ರಲ್ಲಿರುವ ಒಡಂಬಡಿಕೆ ದಿನಾಂಕ 27-10-2016 ರಂದು ಆಗಿದೆ ಅಂದರೆ ಸರಿ. ಸೊಹೆಲ್ ಈತನಿಗೆ ಸ್ವತಂತ್ರವಾದ ಆದಾಯ ಇತ್ತು ಅಂದರೆ ಸರಿ. ಸೊಹೆಲ್ ಪಾಷ ಈತನು ನಿ.ಪಿ.9 ರ ಪ್ರಕಾರ ಸತ್ಯನಾರಾಯಣ ರೆಡ್ಡಿ ಈತನಿಂದ 25,00,000/- ಹಣವನ್ನು ಪಡೆದು ಆಸ್ತಿಯನ್ನು ಬಾಡಿಗೆಯಿಂದ ನೀಡಿದ್ದನು ಅಂದರೆ ಅದರಲ್ಲಿ ಆ ರೀತಿ ಇದ್ದದ್ದು ಕಂಡು ಬಂದಿದೆ ಎಂದು ಸಾಕ್ಷಿ ಉತ್ತರಿಸಿದ್ದಾರೆ. ನಿ.ಪಿ.9 ರಲ್ಲಿ ಕಾಣಿಸಿದಂತಹ ಒಡಂಬಡಿಕೆ ಆರೋಪಿಗೆ ಯಾವುದೇ ರೀತಿಯಿಂದ ಸಂಬಂಧಿಸಿಲ್ಲ ಅಂದರೆ ನನಗೆ ಗೊತ್ತಿರುವುದಿಲ್ಲ.

20. ನಿ.ಪಿ.19 ರಲ್ಲಿ ಕಾಣಿಸಿದಂತಹ ಮನೆಯಲ್ಲಿ ಕಂಡು ಬಂದ ಪಿಠೋಪಕರಣ, ಮನೆ ಉಪಕರಣಗಳ ಮೌಲ್ಯ ಮಾಪನವನ್ನು ನುರಿತ ವ್ಯಕ್ತಿಯಿಂದ ಮಾಡಿಸಿರುವುದಿಲ್ಲ. ಅದರಲ್ಲಿ ಅಂದಾಜಿನಿಂದ ಮೌಲ್ಯವನ್ನು ಕಾಣಿಸಲಾಗಿದೆ. ಅದರಲ್ಲಿ ಕಾಣಿಸಿದಂತಹ ವಸ್ತುಗಳ ಮೌಲ್ಯ 4,59,020/- ಇತ್ತು ಅಂದರೆ ಸರಿಯಲ್ಲ. ಅದರಲ್ಲಿ ತನಿಖಾಧಿಕಾರಿ ಹೆಚ್ಚಿನ ಮೌಲ್ಯವನ್ನು ಕಾಣಿಸಿದ್ದಾರೆ ಅಂದರೆ ಸರಿಯಲ್ಲ. ನಿ.ಪಿ.19 ರಲ್ಲಿರುವ ಮನೆಯಲ್ಲಿ ಸೊಹೆಲ್ ಪಾಷ ವಾಸವಿದ್ದನು ಅಂದರೆ ಸರಿ. ನಿ.ಪಿ.19 ರಲ್ಲಿ ಕಾಣಿಸಿದ ಮನೆಯಲ್ಲಿ ನಿ.ಪಿ.9 ರಲ್ಲ ಕಾಣಿಸಿದಂತಹ ಪಿಠೋಪಕರಣಗಳು 2014 ರಿಂದ ಇದ್ದವು ಅಂದರೆ ಸರಿ. ನಿ.ಪಿ.19 ರಲ್ಲಿ ಕಾಣಿಸಿದ ವಸ್ತುಗಳ ಮೌಲ್ಯವನ್ನು ನಿ.ಪಿ.93 ರಲ್ಲಿ ಕಾಣಿಸಲಾಗಿದೆ ಅಂದರೆ ಸರಿ. ನಿ.ಪಿ.19 ರಲ್ಲಿ ಕಾಣಿಸಿದ ವಸ್ತುಗಳ ಮೌಲ್ಯವನ್ನು ಆಸ್ತಿಯಲ್ಲಿ ಮತ್ತು ವೆಚ್ಚದಲ್ಲಿ ಕಾಣಿಸಿದ್ದೇನೆ ಅಂದರೆ ಸರಿ.

21. ನಾನು ಆರೋಪಿ ಚೆಕ್ ಅವಧಿಯಲ್ಲಿ ಪಡೆದುಕೊಂಡಂತಹ ಒಟ್ಟು ಸಂಬಳವನ್ನು ಆತನ ಆದಾಯ ಎಂದು ಪರಿಗಣಿಸಿದ್ದೇನೆ. ಅದರಲ್ಲಿ ನಾನು 11,22,684/- ಆದಾಯವನ್ನು ಆರೋಪಿ ಆದಾಯ ಎಂದು ಕಾಣಿಸಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಟ್ಟು ಆದಾಯವನ್ನು ಕಾಣಿಸಿಲ್ಲ ಮತ್ತು ನಿವ್ವಳ ಆದಾಯವನ್ನು ಕಾಣಿಸಲಾಗಿದೆ ಎಂದು ಒಪ್ಪಿದ್ದಾರೆ. ಆರೋಪಿಯ ಪಿ. ಎಫ್ ಅನ್ನು ಸಂಬಳದಲ್ಲಿ ಕಟಾಯಿಸಲಾಗಿದೆ ಅಂದರೆ ಸರಿ. ಚೆಕ್ ಅವಧಿಯಲ್ಲಿ ಆರೋಪಿಯ ಸಂಬಳದಿಂದ ಕಟಾಯಿಸಲಾದ ಪಿ.ಎಫ್. ಹಣವನ್ನು ಆರೋಪಿಯ ಆದಾಯವನ್ನು ನಾನು ಪರಿಗಣಿಸಿದ್ದೇನೆ.

ಆರೋಪಿಯ ಪಿ.ಎಫ್. ಹಣವನ್ನು ನಾನು ಆರೋಪಿಗೆ ಬಂದ ಆದಾಯದಲ್ಲಿ ಕಾಣಿಸಿರುವುದಿಲ್ಲ. ಆರೋಪಿ ಸಂಬಳದಲ್ಲಿ ಪಿ.ಎಫ್. ರೂಪದಲ್ಲಿ 11,22,684/- ಹಣ ಕಡಿತಗೊಂಡಿದೆ ಅಂದರೆ ಸಾಕ್ಷಿ ಅದನ್ನು ಲೆಕ್ಕ ಹಾಕಿಲ್ಲ ಎಂದು ಉತ್ತರಿಸಿದ್ದಾರೆ. ಆರೋಪಿಯ ಸಂಬಳದಿಂದ ಆದಾಯ ತೆರಿಗೆ ಕಡಿತಗೊಂಡಿಲ್ಲ ಅಂದರೆ ಸರಿ. ಆರೋಪಿಯ ಸಂಬಳ ಆದಾಯ ತೆರಿಗೆ ಕಟ್ಟುವಷ್ಟು ಇರಲಿಲ್ಲ ಅಂದರೆ ಇರಬಹುದು.

22. ತನಿಖೆಯಲ್ಲಿ ಕಂಡು ಬಂದ ಆಸ್ತಿಗಳ ಮೌಲ್ಯ ಮತ್ತು ಆರೋಪಿ ಶೆಡೂಲ್‌ಗಳಲ್ಲಿ ಕಾಣಿಸಿದ ಆಸ್ತಿಗಳ ಮೌಲ್ಯಗಳಲ್ಲಿ ವ್ಯತ್ಯಾಸ ಕಂಡು ಬಂದ ನಂತರ ನಾನು ಆಸ್ತಿಗಳ ನಿಜವಾದ ಮೌಲ್ಯವನ್ನು ಕಂಡುಕೊಳ್ಳುವ ಉದ್ದೇಶದಿಂದ ಯಾವುದೇ ಮೂರನೇ ನುರಿತ ವ್ಯಕ್ತಿಯಿಂದ ವರದಿಯನ್ನು ಪಡೆದಿಲ್ಲ.

23. ಆರೋಪಿಗೆ ಮತ್ತು ಆತನ ಸಹೋದರರಿಗೆ ಪಿತ್ರಾರ್ಜಿತವಾಗಿ 8 ಎಕರೆ 8 ಗುಂಟೆ ಜಮೀನು ಬಂದಿರುತ್ತದೆ ಅಂದರೆ ಸರಿ. ಆ ಜಮೀನುಗಳಲ್ಲಿ ಆರೋಪಿ ಮತ್ತು ಆತನ ಸಹೋದರರು ರೇಷ್ಮೆ ಮತ್ತು ರಾಗಿ ಬೆಳೆಗಳನ್ನು ಬೆಳೆಯುತ್ತಿದ್ದರು ಅಂದರೆ ಸರಿ. ಪಹಣಿಗಳಲ್ಲಿ ಆರೋಪಿಯ ಹೆಸರು ದಾಖಲು ಇದೆ ಅಂದರೆ ಸರಿ. 8 ಎಕರೆ 8 ಗುಂಟೆ ಜಮೀನಿನಿಂದ ಪ್ರತಿ ವರ್ಷ ಚೆಕ್ ಅವಧಿಯಲ್ಲಿ ಎಷ್ಟು ಆದಾಯ ಬಂದಿತ್ತು ಮತ್ತು ಅದರಲ್ಲಿ ಆರೋಪಿಯ ಭಾಗಕ್ಕೆ ಎಷ್ಟು ಆದಾಯ ಬಂದಿದೆ ಎಂಬುದನ್ನು ನಾನು ನುರಿತ ವ್ಯಕ್ತಿಗಳಿಂದ ವರದಿಯನ್ನು ಪಡೆದಿರುವುದಿಲ್ಲ. ಮೇಲೆ ಹೇಳಿದ ಪಿತ್ರಾರ್ಜಿತ ಆಸ್ತಿಗಳಲ್ಲಿ ಆರೋಪಿಗೆ 1/6 ಅಂಶ ಇತ್ತು ಅಂದರೆ ಸರಿ. ಚೆಕ್ ಅವಧಿಯಲ್ಲಿ ಆರೋಪಿಗೆ ಜಮೀನುಗಳಿಂದ ತನ್ನ ಭಾಗಕ್ಕೆ ರೂಪಾಯಿ 28,23,190/- ಆದಾಯ ಬಂದಿದೆ ಅಂದರೆ ಸರಿಯಲ್ಲ.

24. ನಿ.ಪಿ.95 ರಲ್ಲಿ ಕೃಷಿ ಆದಾಯಗಳನ್ನು 5,00,000/- ರೂಪಾಯಿ ಎಂದು ಕಾಣಿಸಲಾಗಿದೆ ಅಂದರೆ ಸರಿ. ಅದರಲ್ಲಿ ಮನೆ ಬಾಡಿಗೆ ನೀಡಿದ್ದನ್ನು ಕಾಣಿಸಲಾಗಿದೆ ಅಂದರೆ ಸರಿ.

25. ಆರೋಪಿ ಶೆಡೂಲಗಳೊಂದಿಗೆ ಸಲ್ಲಿಸಿದಂತಹ 8 ಝುರಾಕ್ಸ್ ಬಾಡಿಗೆ ಪತ್ರಗಳಲ್ಲಿ ಬಾಡಿಗೆಯ ಒಡಂಬಡಿಕೆಗಳು ರೇಡ್ ಆಗುವ ಪೂರ್ವದಲ್ಲಿ ಆಗಿವೆ ಎಂದು ಕಾಣಿಸಲಾಗಿದೆ ಅಂದರೆ ಸರಿ. ನಾನು ಆ 8 ಬಾಡಿಗೆದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಮತ್ತು ಅವರಿಂದ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಅವರಿಂದ ಬಾಡಿಗೆ ವಿವರ

ಪಡೆದುಕೊಂಡಿರುವುದಿಲ್ಲ. ನಾನು ಯಾವುದೇ ಕಾರಣ ಇಲ್ಲದೆ ಬಾಡಿಗೆ ಆದಾಯವನ್ನು ಆರೋಪಿಯ ಆದಾಯ ಎಂದು ಪರಿಗಣಿಸಿಲ್ಲ ಅಂದರೆ ಸರಿಯಲ್ಲ.

26. ಆರೋಪಿ ತನ್ನ ಕಂಪನಿಗೆ ಆಸ್ತಿ ಮತ್ತು ದಾಯತ್ವ ಪತ್ರಗಳನ್ನು ಸಲ್ಲಿಸುವ ಹೊಣೆಗಾರಿಯನ್ನು ಹೊಂದಿರಲಿಲ್ಲ ಅಂದರೆ ಸರಿಯಲ್ಲ.

27. ಆರೋಪಿಗೆ ನಿ.ಪಿ.104 ನೇದ್ದರ ಪ್ರಕಾರ ಕೆಳಗಿನ ಮೊತ್ತಗಳು ಸಿರಾಜುದ್ದೀನ್ ಶೇಖ್ ಈತನಿಂದ ಬಂದಿವೆ ಅಂದರೆ ಸರಿ. ಸಿರಾಜುದ್ದೀನ್ ಶೇಖ್ ಈತ ಆರೋಪಿ ಅಣ್ಣನ ಮಗ ಅಂದರೆ ಇರಬಹುದು.

Sl. NO.	Date	Total amount
1	25-08-2014	7,89,240
2	02-04-2014	50,000
3	17-02-2014	2,00,000
4	11-06-2013	306266
5	04-06-2013	900090
6	31-05-2013	1,15,000
7	20-05-2013	16,50,000
8	20-05-2013	8,50,000
10	20-05-2013	42,00,000
11	28-03-2013	1,50,000
12	16-11-2012	50,00,000

28. ಮೇಲಿನ ಮೊತ್ತಗಳು ವಿದೇಶದಿಂದ ಬಂದಿವೆ ಅಂದರೆ ಸರಿ. ಸಿರಾಜುದ್ದೀನ್ ಈತನು ಮೇಲೆ ಹೇಳಿದ ಮೊತ್ತವನ್ನು ಆರೋಪಿಗೆ ವರ್ಗಾಹಿಸಿದ್ದೇನೆ ಎಂದು ಪ್ರಮಾಣ ಪತ್ರ ನೀಡಿದ್ದಾನೆ ಅಂದರೆ ಸರಿ. ನಾನು ಸಿರಾಜುದ್ದೀನ್ ಈತನಿಗೆ ಸಮನ್ಸ್ ನೀಡಿ ವಿಚಾರಣೆ ಮಾಡಿರುವುದಿಲ್ಲ.

29. ನಿ.ಪಿ.106 ನೇದ್ದರ ಪ್ರಕಾರ ಆರೋಪಿಯ ಮಗನಾದ ಸೊಹೆಲ್ ಪಾಷ ಈತನು ಕೆಳಗೆ ಹೇಳಿದ ವ್ಯಕ್ತಿಗಳಿಂದ ಆಯಾ ದಿನಾಂಕಗಳಲ್ಲಿ ಸಾಲದ ರೂಪದಲ್ಲಿ ಹಣ

ಪಡೆದುಕೊಂಡಿದ್ದಾನೆ ಅಂದರೆ ಸರಿ.

Sl. NO.	Date	Total amount	ಇವರಿಂದ
1	05-11-2012	1,00,000	ಸಿರಾಜುದ್ದೀನ್
2	15-07-2015	6,00,000	ಸಿರಾಜುದ್ದೀನ್
3	01-10-2008	10,000	ಮೊಹಮ್ಮದ ಆರೀಫ್ ಶೇಖ
4	12-06-2013	5,03,695	ಶಹೀದ್ ಕನಿರತ್

30. ನಾನು ಮೇಲೆ ಹೇಳಿದ ಮೂರು ವ್ಯಕ್ತಿಗಳನ್ನು ಕರೆಸಿ ಮೇಲಿನ ಮೊತ್ತಗಳ ಸತ್ಯ ಅಸತ್ಯಗಳನ್ನು ಕಂಡುಕೊಂಡಿಲ್ಲ. ನನಗೆ ಈಗ ತೋರಿಸುತ್ತಿರುವ KOTAK ಮಹೇಂದ್ರಾ ಬ್ಯಾಂಕಿನ ತಖ್ತೆ ಸೊಹೆಲ್ ಪಾಷ ಈತನದು ಇದೆ ಅಂದರೆ ಸರಿ. ಸಾಕ್ಷಿ ಗುರುತಿಸಿದ ಈ ದಾಖಲೆಯನ್ನು ನಿ.ಡಿ. 1 ಎಂದು ಗುರುತಿಸಲಾಯಿತು.

31. ಆರೋಪಿಗೆ ಬಂದ ಬಾಡಿಗೆಯನ್ನು, ಬ್ಯಾಂಕ್ ಮೂಲಕ ಸಿರಾಜೂದ್ದಿನ್ ಈತನ ಮೂಲಕ ಬಂದ ಮೊತ್ತವನ್ನು ಸೊಹೆಲ್ ಈತನು ಪಡೆದುಕೊಂಡಂತ ಸಾಲದ ಮೊತ್ತವನ್ನು ಉದ್ದೇಶ ಪೂರ್ವ ಕವಾಗಿ ಆದಾಯದಲ್ಲಿ ಕಾಣಿಸಿಲ್ಲ ಅಂದರೆ ಸರಿಯಲ್ಲ.

(ಆರೋಪಿ ಪರ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ. ಮೇಲಿನ ಪಾಟೀ ಸವಾಲನ್ನು ಅವಲೋಕನೆ ಮಾಡಿ ಸಮಯ ನೀಡಿವುದು ಸೂಕ್ತ ಎಂದು ಕಂಡು ಬಂದಿರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-
ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು.

ಸಾಕ್ಷಿಯನ್ನು ಪುನ**:** ಕರೆಯಿಸಿ ದಿನಾಂಕ **04-06-2026** ರಂದು ಪ್ರಮಾಣ ವಚನ ಭೋದಿಸಲಾಯಿತು**.**

ಮುಂದುವರೆದ ಪಾಟೀ ಸವಾಲು**:** ಆರೋಪಿ ಪರ ವಕೀಲರಿಂದ**:**

32. ನಿ.ಪಿ.27 ರಲ್ಲಿ ಕಾಣಿಸಿದ ಮನೆಯಲ್ಲಿ ಕಂಡು ಬಂದಂತಹ ಉಪಕರಣಗಳ/ಸಾಮಾನುಗಳ ಮೌಲ್ಯ ಮಾಪನವನ್ನು ನುರಿತ ವ್ಯಕ್ತಿಗಳಿಂದ ನಾನು ಮಾಡಿಸಿಲ್ಲ.

33. ನಿ.ಪಿ.19 ರಲ್ಲಿ ಕಾಣಿಸಿದ ಎರಡು ಮೋಟಾರು ಸೈಕಲುಗಳ ಮೌಲ್ಯಗಳನ್ನು ನಾನು ಆರೋಪಿಯ ಆಸ್ತಿಗಳ ಪಟ್ಟಿಯ ಕ್ರಮ ಸಂ. 2 ಮತ್ತು 3 ರಲ್ಲಿ ದೋಷಾರೋಪಣ ಪತ್ರದಲ್ಲಿ ಕಾಣಿಸಿದ್ದೇನೆ ಅಂದರೆ ಸರಿ. ದೋಷಾರೋಪಣ ಪತ್ರದೊಂದಿಗೆ Statement-B ನೇದ್ದರಲ್ಲಿ ಅನುಕ್ರಮ ನಂಬರ್ 6-AH/A(1) ನೇದ್ದರಲ್ಲಿ ಎರಡೂ ಮೋಟಾರು ಸೈಕಲುಗಳ ಮೌಲ್ಯ ಕೂಡಿದೆ ಅಂದರೆ ಸರಿ. ಮತ್ತೆ ನಾನು ಅದೇ statement ದಲ್ಲಿ ಅನುಕ್ರಮ ನಂಬರ್ 3-AV/(1) ನೇದ್ದರಲ್ಲಿ ಎರಡೂ ವಾಹನಗಳ ಮೌಲ್ಯಗಳನ್ನು ಆಸ್ತಿಗಳಲ್ಲಿ ಕಾಣಿಸಿದ್ದೇನೆ ಅಂದರೆ ಸರಿ.

34. ನಿ.ಪಿ.9 ರಲ್ಲಿ ಇರುವ ಮನೆಯನ್ನು ಬಾಡಿಗೆಯಿಂದ ನೀಡುವಾಗ ಮಾಲೀಕನ ಉಪಕರಣಗಳು ಇದ್ದವು ಎಂದು ಕಾಣಿಸಿದ್ದಾರೆ ಅಂದರೆ ಸರಿ. ಇದೇ ಉಪಕರಣಗಳನ್ನು ನಿ.ಪಿ.19 ರಲ್ಲಿ ಅನುಕ್ರಮ ನಂಬರ್ 29, 30, 33, 133, 139 ಕಾಣಿಸಲಾಗಿದೆ ಅಂದರೆ ಸರಿ. ನಿ.ಪಿ.19 ರಲ್ಲಿ ಕಂಡು ಬರುವ ಸಾಮಾನುಗಳ ನಿಜವಾದ ಮೌಲ್ಯ 4,59,020/- ಆಗುತ್ತಿತ್ತು ಮತ್ತು ಅವುಗಳ ಮೌಲ್ಯವನ್ನು ದೋಷಾರೋಪಣ ಪತ್ರದಲ್ಲಿ ಹೆಚ್ಚಾಗಿ ಕಾಣಿಸಲಾಗಿದೆ ಅಂದರೆ ಸರಿಯಲ್ಲ. ಆ ಮೌಲ್ಯವನ್ನು ಕಂಡುಕೊಳ್ಳುವಾಗ ಆರೋಪಿ ನೀಡಿದ ವಿವರಣೆಯನ್ನು ನಾನು ಪರಿಶೀಲನೆ ಮಾಡಿಲ್ಲ ಅಂದರೆ ಸರಿಯಲ್ಲ. ನಿ.ಪಿ.19 ರಲ್ಲಿ ತೋರಿಸಿದಂತಹ ಬಟ್ಟೆಗಳಲ್ಲಿ ಅನೇಕ ಬಟ್ಟೆಗಳು ಉಡುಗೊರೆಯಾಗಿ ಬಂದಿದ್ದವು ಅಂದರೆ ಸರಿಯಲ್ಲ. ಆ ಉಡುಗೊರೆಗಳ ಮೊತ್ತವನ್ನು ಆರೋಪಿ ತನ್ನ ಶೆಡ್ಯೂಲ್ ಗಳಲ್ಲಿ ತೋರಿಸಿದದ್ದರು ಸಹ ಅದನ್ನು ಯಾವುದೇ ಕಾರಣಗಳಿಲ್ಲದೆ ತಿರಸ್ಕರಿಸಿದ್ದೇನೆ ಅಂದರೆ ಸರಿಯಲ್ಲ.

35. ನಿ.ಪಿ.19 ರಲ್ಲಿ ಕಾಣಿಸಿದ ಬಂಗಾರದ ಆಭರಣಗಳು ಆರೋಪಿಯ ಹೆಂಡತಿಗೆ

ಮದುವೆಯ ಸಮಯದಲ್ಲಿ ಉಡುಗೊರೆ ರೂಪದಲ್ಲಿ ಬಂದಿದ್ದವು ಅಂದರೆ ಸರಿಯಲ್ಲ. ಆ ಬಂಗಾರದ ಆಭರಣಗಳನ್ನು ತೂಕ ಮಾಡಿದ ಅಕ್ಕಸಾಲಿಗನ ಹೇಳಿಕೆಯನ್ನು ಪಡೆದಿಲ್ಲ.

36. ಸಿದ್ದಿಕಿ ನಗರದಲ್ಲಿರುವ ಮುಬಾರಕ್ ಬೇಗಂ ಇವಳ ಹೆಸರಿನಲ್ಲಿರುವ ಮನೆಯಿಂದ ಆರೋಪಿಗೆ ಒಟ್ಟು 11,15,500/- ರೂಪಾಯಿ ಹಣ ಚೆಕ್ ಅವಧಿಯಲ್ಲಿ ಬಾಡಿಗೆ ರೂಪದಿಂದ ಬಂದಿತ್ತು ಅಂದರೆ ಸರಿ.

37. ಮೈಸೂರಿನಲ್ಲಿರುವ ಎನ್. ಆರ್. ಮೊಹಲ್ಲಾದಲ್ಲಿರುವ ಮನೆ ನಂಬರ್ 2974 ಮುಬಾರಕ್ ಬೇಗಂ ಇವಳ ಹೆಸರಿನಲ್ಲಿರುವ ಮನೆಯಿಂದ ಆರೋಪಿಗೆ ಒಟ್ಟು 8,44,250/- ರೂಪಾಯಿ ಹಣ ಚೆಕ್ ಅವಧಿಯಲ್ಲಿ ಬಾಡಿಗೆ ರೂಪದಿಂದ ಬಂದಿತ್ತು ಅಂದರೆ ಸರಿ.

38. ಮೈಸೂರಿನಲ್ಲಿರುವ ಎನ್. ಆರ್. ಮೊಹಲ್ಲಾದಲ್ಲಿರುವ ಮನೆ ನಂಬರ್ 362 ಮುಬಾರಕ್ ಬೇಗಂ ಇವಳ ಹೆಸರಿನಲ್ಲಿರುವ ಮನೆಯಿಂದ ಆರೋಪಿಗೆ ಒಟ್ಟು 6,84,250/- ರೂಪಾಯಿ ಹಣ ಚೆಕ್ ಅವಧಿಯಲ್ಲಿ ಬಾಡಿಗೆ ರೂಪದಿಂದ ಬಂದಿತ್ತು ಅಂದರೆ ಸರಿ.

39. ಬೆಂಗಳೂರಿನ ವಿನಾಯಕ ನಗರದಲ್ಲಿರುವ ಸೊಹೇಲ್ ಪಾಷ ಇವರ ಹೆಸರಿನಲ್ಲಿರುವ ಮನೆಯಿಂದ ಒಟ್ಟು 17,94,100/- ರೂಪಾಯಿ ಹಣ ಚೆಕ್ ಅವಧಿಯಲ್ಲಿ ಬಾಡಿಗೆ ರೂಪದಿಂದ ಬಂದಿತ್ತು ಅಂದರೆ ಸರಿ.

40. ನಾನು ಮೇಲೆ ಹೇಳಿದ ಬಾಡಿಗೆ ರೂಪದಿಂದ ಹಣವನ್ನು ದುರುದ್ದೇಶದಿಂದ ಆರೋಪಿಯ ಆದಾಯವೆಂದು ಕಾಣಿಸಿಲ್ಲ ಅಂದರೆ ಸರಿಯಲ್ಲ. ಆರೋಪಿ ಮತ್ತು ಆತನ ಮಗ ಸಾಲದ ರೂಪದಲ್ಲಿ ಪಡೆದ ಹಣವನ್ನು ದುರುದ್ದೇಶದಿಂದ ಆರೋಪಿಯ ಆದಾಯವೆಂದು ನಾನು ಕಾಣಿಸಿಲ್ಲ ಅಂದರೆ ಸರಿಯಲ್ಲ.

41. ಆರೋಪಿಗೆ ಮತ್ತು ಆತನ ಮಗನಿಗೆ ಎನ್. ಆರ್. ಐ., ಮೂಲಕ ಬ್ಯಾಂಕಿ ಮೂಲಕ ಬಂದ ಹಣವನ್ನು ಆರೋಪಿಯ ಆದಾಯವೆಂದು ಪರಿಗಣಿಸದೆ ಇರಲಿಕ್ಕೆ ಕಾರಣ ಏನು ಎಂಬುದನ್ನು ನಾನು ದೋಷಾರೋಪಣ ಪತ್ರದಲ್ಲಿ ಕಾಣಿಸಿರುವುದಿಲ್ಲ.

42. ಸೊಹೇಲ್ ಈತನ ಸಂಬಳದ ಆದಾಯವನ್ನು ಪರಿಗಣಿಸುವಾಗ ಆತನ ಸಂಬಳದಿಂದ ಕಡಿತಗೊಂಡ 32,065/- ಉಳಿತಾಯದ ಹಣವನ್ನು ಆದಾಯವೆಂದು ಕಾಣಿಸಿಲ್ಲ ಅಂದರೆ ಸರಿ.

43. ನಾನು ಆರೋಪಿಗೆ ಪಿತ್ರಾರ್ಜಿತ ಆಸ್ತಿಗಳಿಂದ ಬಂದ ಆದಾಯವನ್ನು ಸೂಕ್ತವಾಗಿ ಪರಿಗಣಿಸಿಲ್ಲ ಅಂದರೆ ಸರಿಯಲ್ಲ.

44. ಕೆಎ-04-ಹೆಚ್ಎ-9404 ಇದನ್ನು ತೋಹೆಲ್ ಅಫೆಲ್ ಆಹ್ಮದ ಈತನು ಖರೀದಿ ಮಾಡಿದಾಗ ಅದು ಹಳೆಯ ವಾಹನ ಆಗಿತ್ತು ಅಂದರೆ ಸರಿ. ಈ ವಾಹನದ ಇಂಧನದ ವೆಚ್ಚವನ್ನು ವಾಹನವನ್ನು ಹೊಸದಾಗಿ ನೊಂದಣಿ ಮಾಡಿದ ದಿನಾಂಕದಿಂದ ಲೆಕ್ಕ ಹಾಕಲಾಗಿದೆ ಅಂದರೆ ಸರಿ. (ನಿ.ಪಿ.103) ಆ ವೆಚ್ಚದಲ್ಲಿ 23,378/- ರೂಪಾಯಿ ಹೆಚ್ಚು ತೋರಿಸಲಾಗಿದೆ ಅಂದರೆ ಸರಿಯಲ್ಲ.

45. ಆರೋಪಿಯ ಸಂಬಳದಿಂದ ಚೆಕ್ ಅವಧಿಯಲ್ಲಿ ನಾಲ್ಕು ಎಲ್. ಐ. ಸಿ. ಪಾಲಿಸಿಗಳ ಕಂತುಗಳ ಮೊತ್ತ 3,54,740/-ಕಟಾವು ಆಗಿದೆ ಅಂದರೆ ಸರಿ. ಅದನ್ನು ಆದಾಯದಲ್ಲಿ ನಾನು ತೋರಿಸಿಲ್ಲ ಅಂದರೆ ಸಾಕ್ಷಿ ಆ ಮೊತ್ತವನ್ನು ಎಲ್. ಐ. ಸಿ. maturity ಒಟ್ಟು ಮೊತ್ತವನ್ನು ಕಾಣಿಸಿದ್ದೇನೆ ಎಂದು ಉತ್ತರಿಸಿದ್ದಾರೆ. 3,54,740/- ರೂಪಾಯಿ ಮೊತ್ತವನ್ನು ಆರೋಪಿಯ ಸಂಬಳ ಲೆಕ್ಕ ಹಾಕುವಾಗ ಖರ್ಚು ಎಂದು ಕಾಣಿಸಿದ್ದೇನೆ ಅಂದರೆ ಸರಿ.

46. ನಿ.ಪಿ.19 ರ ಕ್ರಮ ಸಂ. 136 ರಲ್ಲಿ washing machine ಮೌಲ್ಯ 22,000/- ಹಣವನ್ನು ಕಾಣಿಸಲಾಗಿದೆ ಅಂದರೆ ಸರಿ. ಅದೇ ರೀತಿ ಆರೋಪಿಯ ಖರ್ಚಿನ ವಿಭಾಗದಲ್ಲಿ washing machine ಮೌಲ್ಯ 42,800/- ರೂಪಾಯಿ ಎಂದು ಕಾಣಿಸಿದ್ದೇನೆ ಅಂದರೆ ಸರಿ. Washing machine ಮೌಲ್ಯ ಮತ್ತು ಖರ್ಚನ್ನು ಲೆಕ್ಕ ಹಾಕುವಾಗ ಎರಡು ಮೊತ್ತವನ್ನು ಪರಿಗಣಿಸಿದ್ದೇನೆ ಅಂದರೆ ಸರಿಯಲ್ಲ. ಆ ವಸ್ತುವಿನ ಮೌಲ್ಯ 20,800/- ರೂಪಾಯಿ ಮಾತ್ರ ಕಾಣಿಸಬೇಕಾಗಿತ್ತು ಅಂದರೆ ಸರಿಯಲ್ಲ.

47. ನಿ.ಪಿ.19 ರ ಕ್ರಮ ಸಂ. 122 ರಲ್ಲಿ laptop ಮೌಲ್ಯ 55,000/- ಹಣವನ್ನು ಕಾಣಿಸಲಾಗಿದೆ ಅಂದರೆ ಸರಿ. ಅದೇ ರೀತಿ ಆರೋಪಿಯ ಖರ್ಚಿನ ವಿಭಾಗದಲ್ಲಿ laptop ಮೌಲ್ಯ 55,000/- ರೂಪಾಯಿ ಎಂದು ಕಾಣಿಸಿದ್ದೇನೆ ಅಂದರೆ ಸರಿ. laptop ಮೌಲ್ಯ ಮತ್ತು ಖರ್ಚನ್ನು ಲೆಕ್ಕ ಹಾಕುವಾಗ ಎರಡು ಮೊತ್ತವನ್ನು ಪರಿಗಣಿಸಿದ್ದೇನೆ ಅಂದರೆ ಸರಿಯಲ್ಲ. ಆ ವಸ್ತುವಿನ ಮೌಲ್ಯವನ್ನು ಎರಡು ಬಾರಿ ಪರಿಗಣಿಸಿದ್ದೇನೆ ಅಂದರೆ ಸರಿಯಲ್ಲ.

48. ಆರೋಪಿ ಮತ್ತು ಆತನ ಕುಟುಂಬದವರು ಶಾಖಾಹಾರಿಗಳು ಆಗಿದ್ದರು ಅಂದರೆ ಸರಿಯಲ್ಲ. ನಿ.ಪಿ.19 ರಲ್ಲಿ ಚಪ್ಪಲಿ, ಬಟ್ಟೆ, ಹಾಸಿಗೆ ಇವುಗಳ ಮೌಲ್ಯವನ್ನು ಕಾಣಿಸಿದ್ದರೂ ಸಹ ಮತ್ತೆ ಅವುಗಳ ಮೌಲ್ಯವನ್ನು ಕೌಟುಂಬಿಕ ಖರ್ಚಿನಲ್ಲಿ ಕಾಣಿಸಲಾಗಿದೆ ಅಂದರೆ ಸರಿಯಲ್ಲ. ಆರೋಪಿಯ ಕೌಟುಂಬಿಕ ವೆಚ್ಚ 10,00,000/- ರೂಪಾಯಿಗಿಂತ ಹೆಚ್ಚು ಆಗಿಲ್ಲ ಅಂದರೆ ಸರಿಯಲ್ಲ. ಆ ವೆಚ್ಚವನ್ನು ಹೆಚ್ಚಾಗಿ ಕಾಣಿಸಲಾಗಿದೆ ಅಂದರೆ ಸರಿಯಲ್ಲ.

49. ಆರೋಪಿಯ ಆದಾಯವನ್ನು ಪರಿಗಣಿಸುವಾಗ ಆತ ಸೇವೆಗೆ ಸೇರುವ ಪೂರ್ವದಲ್ಲಿ ಪಡೆದ ಆಸ್ತಿಗಳ ಮೌಲ್ಯವನ್ನು ತೋರಿಸಿಲ್ಲ ಅಂದರೆ ಸರಿ. ಆರೋಪಿಯ ಆಸ್ತಿಗಳ ಮೌಲ್ಯವನ್ನು ಮತ್ತು ಆತನ ಖರ್ಚನ್ನು ಹೆಚ್ಚಾಗಿ ತೋರಿಸಿದ್ದೇನೆ ಅಂದರೆ ಸರಿಯಲ್ಲ. ಆರೋಪಿಗೆ ಸಾಲದ ರೂಪದಲ್ಲಿ, ಬಾಡಿಗೆ ರೂಪದಲ್ಲಿ ಬಂದ ಹಣವನ್ನು ಪರಿಗಣಿಸಿದರೆ ಆರೋಪಿಯ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಲು ಬರುವುದಿಲ್ಲ ಎಂದು ಅವುಗಳನ್ನು ಸೇರಿಸದೆ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಅಕ್ರಮವಾಗಿ ಯಾವುದೇ ಆಸ್ತಿಗಳನ್ನು ಗಳಿಸಿಲ್ಲ ಅಂದರೆ ಸರಿಯಲ್ಲ. ನಾನು ದೋಷಾರೋಪಣ ಪತ್ರದಲ್ಲಿ ತೋರಿಸಿದಂತಹ ಅಕ್ರಮ ಆಸ್ತಿಯ ಮೌಲ್ಯ ತಪ್ಪು ಇರುತ್ತದೆ ಅಂದರೆ ಸರಿಯಲ್ಲ.

50. ಆರೋಪಿ ಸರಕಾರಿ ನೌಕರನು ಅಲ್ಲದೆ ಇದ್ದರೂ ಸಹ ಆತನ ವಿರುದ್ಧ ಸುಳ್ಳು ದೋಷಾರೋಪಣ ಪತ್ರವನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಸೇವೆ ಸಲ್ಲಿಸುತ್ತಿದ್ದ ಕಂಪನಿಯ ನಿಯಮಾವಳಿಗಳನ್ನು ಉದ್ದೇಶ ಪೂರ್ವಕವಾಗಿ ದೋಷಾರೋಪಣ ಪತ್ರದೊಂದಿಗೆ ಸಲ್ಲಿಸಿಲ್ಲ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು ಪೀಠ ಸಿಂಧನೂರು.